ದಿನಾಂಕ **:** 13.03.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿಯ ಪರವಾಗಿ ಶ್ರೀಎನ್.ವಿ.ಜೆ. ವಕೀಲರಿಂದ :**

*ವಾದಿ ಮತ್ತು ಪ್ರತಿವಾದಿಗಳನ್ನು ನಾನು ನೋಡಿರುತ್ತೇನೆ . ವಾದಿಗೆ ಪ್ರತಿವಾದಿಗಳು ಅಣ್ಣ ತಮ್ಮಂದಿರು ಆಗಬೇಕು. ವಾದಿ ಮತ್ತು ಪ್ರತಿವಾದಿಗಳು ಮೊದಲು ಒಟ್ಟಿಗೆ ಇದ್ದರು , ಈಗ ಬೇರೆ ಬೇರೆ ವಾಸವಿದ್ದಾರೆ. ವಾದಿಗೆ ಊರಿನಲ್ಲಿ ಕೇವಲ ಒಂದು ಸೈಟ್ ಇದೆ . ಆದರೆ ಮನೆ ಇಲ್ಲ , ಅದನ್ನು ಈಗ ಕಟ್ಟುತ್ತಿದ್ದಾರೆ . ನಿರ್ಮಾಣ ಹಂತದಲ್ಲಿರುವ ಮನೆಯ ಚೆಕ್ಕುಬಂದಿ ಪೂರ್ವಕ್ಕೆ ವೆಂಕಟರೆಡ್ಡಿಯವರ ಮಗ ನಾರಾಯಣಸ್ವಾ ಮಿ , ಪಶ್ಚಿಮಕ್ಕೆ ಸೊಣ್ಣಪ್ಪಗಾರಿ ವೆಂಕಟರೆಡ್ಡಿ , ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಶ್ರೀರಾಮರೆಡ್ಡಿಯವರ ಜಮೀನು ಇರುತ್ತದೆ. ಸದರಿ ಮನೆಯ ವಿಸ್ತೀರ್ಣ **30 X 40** ಅಡಿ ಇರುತ್ತದೆ. ಸೈಟಿನ ಚೆಕ್ಕುಬಂದಿ ಪೂರ್ವಕ್ಕೆ ಮುನಿವೆಂಕಟರೆಡ್ಡಿ , ಪಶ್ಚಿಮಕ್ಕೆ ವೆಂಕಟಶ್ಯಾಮಿರೆಡ್ಡಿ, ಉತ್ತರಕ್ಕೆ ಸುನಂದಮ್ಮಳ ನಿವೇಶನ ಮತ್ತು ದಕ್ಷಿಣಕ್ಕೆ ರಸ್ತೆ ಇರುತ್ತದೆ . ಮೇಲೆ ಹೇಳಿದ ಎರಡನೆ ಚೆಕ್ಕುಬಂದಿಗೆ ದಾವೆ ಹಾಕಲಾಗಿದೆ . ಅದರ ಸರ್ವೇ ನಂಬರ್ **117/1** ಆಗಿರುತ್ತದೆ. ಆದರೆ ಮನೆಯ ಸೈಟ್ ನಂಬರ್ ನನಗೆ ಗೊತ್ತಿಲ್ಲ . ಕಟ್ಟುತ್ತಿರುವ ಮನೆಗೂ ದಾವಾ ಆಸ್ತಿಗೂ ಅರ್ಧ ಕಿ .ಮೀ. ಅಂತರ ಇದೆ. ಪ್ರತಿವಾದಿಗಳ ಹೆಸರು ಮತ್ತು ವಿಳಾಸ ನನಗೆ ಗೊತ್ತು . ಈ ದಾವೆಯನ್ನು ವೆಂಕಟಶ್ಯಾಮಿರೆಡ್ಡಿ , ನಾರಾಯಣರೆಡ್ಡಿ ಮತ್ತು ಚಿಕ್ಕನಾರಾಯಣಸ್ವಾಮಿ ವಿರುದ್ಧ ಹಾಕಲಾಗಿದೆ . ಅವರ ವಿರುದ್ಧ ಒಂದು ದಾವೆ ಹಾಕಲಾಗಿದೆ . ಸುನಂದಮ್ಮನವರು ಸೇರಿ ಇದೇ ಪ್ರತಿವಾದಿಗಳ ವಿರುದ್ಧ ಮತ್ತೊಂದು ದಾವೆ ಹಾಕಿದ್ದಾರೆಂದರೆ ಗೊತ್ತಿಲ್ಲ . ಅದರಿ ನಂಬರ್ ನನಗೆ ಗೊತ್ತಿಲ್ಲ . ಆದರೆ ಚೆಕ್ಕುಬಂದಿ ಗೊತ್ತು , ಆದರೆ ಯಾರ ಮೇಲೆ ಕೇಸು ಹಾಕಿದ್ದಾರೆಂದು ನನಗೆ ಗೊತ್ತಿಲ್ಲ. **2** ನೇ ಪ್ರತಿವಾದಿಯವರು ವಾದಿ ಮತ್ತು ಆತನ ಪತ್ನಿಯ ವಿರುದ್ಧ ಒಂದು ದಾವೆ ಹಾಕಿದ್ದಾರೆಂದರೆ ನನಗೆ ಗೊತ್ತಿಲ್ಲ.*

*ವಾದಿಯ ತಂದೆಯಿಂದ ದಾವಾ ಆಸ್ತಿ ವಾದಿಗೆ ಬಂದಿರುತ್ತದೆ. ಆ ರೀತಿ **20** ವರ್ಷಗಳ ಹಿಂದೆ ಬಂದಿದೆ. ಅದಕ್ಕೂ ಮೊದಲು ಸದರಿ ಆಸ್ತಿಯ ಖಾತೆ ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ನಿಖರವಾಗಿ ದಾವಾ ಆಸ್ತಿ ಸರ್ವೇ ನಂಬರ್ ಆಸ್ತಿಯೋ ಅಥವಾ ಗ್ರಾಮಠಾಣಾ ಆಸ್ತಿಯೋ ಎಂದು ಹೇಳಲಾಗುವುದಿಲ್ಲ. ದಾವಾ ಆಸ್ತಿಯ ಪಕ್ಕದಲ್ಲಿ ನನಗೆ ನಿವೇಶನವಿದೆ. ದಾವಾ ಆಸ್ತಿಯ ಪೂರ್ವಕ್ಕೆ ನನ್ನ ಸದರಿ ನಿವೇಶನವಿದೆ. ಅದರ ಚೆಕ್ಕುಬಂದಿ ಪೂರ್ವಕ್ಕೆ ಖರಾಬು, ಪಶ್ಚಿಮಕ್ಕೆ ಸುನಂದಮ್ಮ, ಉತ್ತರಕ್ಕೆ ಲೋಕೇಶ ಮತ್ತು ದಕ್ಷಿಣಕ್ಕೆ ಮುನಿವೆಂಕಟರೆಡ್ಡಿ. ಸದರಿ ಆಸ್ತಿ ಪಂಚಾಯಿತಿ ಮೂಲಕ ನನಗೆ ಬಂದಿರುತ್ತದೆ. ವಾದಿಗಳು ಪ್ರತಿವಾದಿಗಳ ವಿರುದ್ಧ ಯಾವ ಕಾರಣಕ್ಕೆ ದಾವೆ ಹಾಕಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ಅದೇ ರೀತಿ ಯಾವ ವರ್ಷ ಹಾಕಿದ್ದಾರೆಂದು ತಿಳಿದುಕೊಂಡಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಗಳ ವಿರುದ್ಧ ಮಾತುಕತೆ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ನಮ್ಮ ಊರಿನಲ್ಲಿ ದಾವೆಯಲ್ಲಿ ಉಲ್ಲೇಖಿಸಿರುವಂತಹ ನಿವೇಶನ ಇರುವುದಿಲ್ಲವೆಂದರೆ ಸರಿಯಲ್ಲ. ವಾದಿಯವರು ಸದರಿ ಆಸ್ತಿಯ ಸ್ವಾಧೀನ ಹೊಂದಿಲ್ಲ ಎಂದರೆ ಸರಿಯಲ್ಲ. ವಾದಿಯವರ ಹೆಸರಿಗೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಖಾತೆ, ಕಂದಾಯ ಇಲ್ಲವೆಂದರೆ ಸಾಕ್ಷಿಯು ಪಂಚಾಯಿತಿ ಮೂಲಕ ಆಗಿದೆ ಎಂದು ನುಡಿಯುತ್ತಾರೆ. ನನಗೆ ನಿಜಾಂಶ ತಿಳಿಯದಿದ್ದರೂ ವಾದಿಗಳಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಊರು ಸರ್ವೇ ನಂಬರ್ ನಲ್ಲಿದೆ ಎಂದರೆ ಸರಿಯಲ್ಲ. ಊರಿನ ಪಶ್ಚಿಮಕ್ಕೆ ಸರ್ವೇ ನಂಬರ್ ಆಸ್ತಿ ಇದೆ.*

*ಊರಿನಲ್ಲಿ **2** ನೇ ಪ್ರತಿವಾದಿಗೆ ಸರ್ವೇ ನಂಬರ್ **13/ಪಿ5** ರಲ್ಲಿ **1** ಎಕರೆ ಆಸ್ತಿ ಮಂಜೂರಾಗಿದೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ **1** ನೇ ಪ್ರತಿವಾದಿಯು ಶೆಡ್ ಕಟ್ಟಿಕೊಂಡು ಕುರಿ ಸಾಕಿದ್ದಾರೆ. ಆ ರೀತಿ ಆಸ್ತಿ ಮಂಜೂರಾದ ನಂತರ **2** ನೇ ಪ್ರತಿವಾದಿಗೆ ಸಾಗುವಳಿ ಚೀಟಿ ನೀಡಿದ್ದಾರೆಂದರೆ ಸರಿ. ಸದರಿ*

*ಆಸ್ತಿಯ ಮೇಲೆ 2 ನೇ ಪ್ರತಿವಾದಿಯು ಬ್ಯಾಂಕಿನಿಂದ ಸಾಲ ಪಡೆದು ಅಭಿವೃದ್ಧಿ ಪಡಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯು ವಾದಿ ಮತ್ತು ಆತನ ಪತ್ನಿಯ ವಿರುದ್ಧ ದಾವೆ ಹಾಕಿ ತಡೆಯಾಜ್ಞೆ ಪಡೆದಿದ್ದಾನೆಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಸ್ವಾ ಧೀನ ಇರುವ ವಿಚಾರ ನನಗೆ ತಿಳಿದಿದ್ದರೂ, ನಾನು ವಾದಿಗಳು ಸ್ವಾ ಧೀನ ಇದ್ದಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.*

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ *ಗ*ಣಕೀಕರಿಸಲಾಯಿತು).**

ಓದಿ ಹೇಳಿ ಕೇಳಿ ಸರಿಯಾಗಿದೆ.

(ಮನು *ಬಿ.ಕೆ.*)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಶ್ರೀನಿವಾಸಪುರ